# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2225-03-277-2-53 ಅಬ್ಜೆಕ್ಟೀವ್ ಕೋಡ್ 059 (ಇತರೆ ಖರ್ಚುಗಳು) ಹಾಗೂ ಅಬ್ಜೆಕ್ಟೀವ್ ಕೋಡ್ 034 (ಗುತ್ತಿಗೆ/ಹೊರಗುತ್ತಿಗೆ) ರಡಿ ಉಳಿತಾಯವಿರುವ ಅನುದಾನ ರೂ.2549.25 ಲಕ್ಷಗಳನ್ನು ಲೆಕ್ಕಶಿರ್ಷಿಕೆ: 2225-03-277-2-52 ಅಬ್ಜೆಕ್ಟೀವ್ ಕೋಡ್117(ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ)ರಡಿ ಪುನರ್ವಿನಿಯೋಗ ಮಾಡಿರುವ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ:-**

1. 2021-22 ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: ಹಿಂವಕನಿ/ವಿವೇ/ಸಿಆರ್-/2021-22, ದಿನಾಂಕ:31/01/2022.
3. ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ: FD 360 BRS 2021 ದಿನಾಂಕ:11.02.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ 2021-22ನೇ ಸಾಲಿನ ಅಯವ್ಯಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನವನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2)ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆಯಲ್ಲಿ 2020-21ನೇ ಸಾಲಿನಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿಯಲ್ಲಿ 1696525 ನವೀಕರಣ ಅರ್ಜಿಗಳಿದ್ದು, ರೂ. 103.79 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನದಲ್ಲಿ 6 ರಿಂದ 10 ನೇ ತರಗತಿಯ ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿವೇತನ ಮಂಜೂರು ಮಾಡಲಾಗಿರುತ್ತದೆ. ಉಳಿದಂತೆ ಹೊಸ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ ಹಾಗೂ ಇತರೆ ತರಗತಿಯ ನವೀಕರಣ ವಿದ್ಯಾರ್ಥಿಗಳಿಗೆ ಆಯವ್ಯಯದ ಕೊರತೆಯಿಂದ ವಿದ್ಯಾರ್ಥಿವೇತನ ಮಂಜೂರು ಮಾಡಲು ಸಾಧ್ಯವಾಗಿರುವುದಿಲ್ಲ. ಕಳೆದ ಮೂರು ವರ್ಷಗಳಿಂದ ಅನುದಾನ ಕೊರತೆಯಿಂದ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ ಹಾಗೂ 2021-22ನೇ ಸಾಲಿನಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಹೊಸದಾಗಿ ಅರ್ಜಿಯನ್ನು ಆಹ್ವಾನಿಸಿ ಸ್ವೀಕರಿಸಲಾಗಿರುತ್ತದೆ. ಹಾಗಾಗಿ ಪ್ರಸಕ್ತ ಸಾಲಿಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನಕ್ಕಾಗಿ ನಿಗದಿಪಡಿಸಿರುವ ರೂ. 50.00 ಕೋಟಿಗಳ ಅನುದಾನದಲ್ಲಿ ರೂ. 45.04 ಕೋಟಿಗಳನ್ನು ಕೇವಲ 9 ಮತ್ತು 10 ನೇ ತರಗತಿಯ ನವೀಕರಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ 2021-22 ನೇ ಸಾಲಿಗೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ 2225-03-277-2-53 ಅಬ್ಜೆಕ್ಟೀವ್ ಕೋಡ್ 059 ರಡಿ ರೂ. 466.50 ಲಕ್ಷಗಳು ಹಾಗೂ 2225-03-277-2-53 ಅಬ್ಜೆಕ್ಟೀವ್ ಕೋಡ್ 034 ರಡಿ ರೂ. 2082.75 ಲಕ್ಷಗಳು ಹೀಗೆ ಒಟ್ಟು 2549.25 ಲಕ್ಷಗಳ ಅನುದಾನವು ಈ ಕೆಳಕಂಡ ಕಾರಣಗಳಿಂದ ಉಳಿಕೆ ಆಗಿರುತ್ತದೆ.

- ಪ್ರಸ್ತುಕ್ತ ಸಾಲಿನಲ್ಲಿ ರಾಜ್ಯವಲಯದಡಿ ಕಾರ್ಯನಿರ್ವಹಿಸುತ್ತಿರುವ 457 ವಿದ್ಯಾರ್ಥಿನಿಲಯಗಳು ಜಿಲ್ಲಾವಲಯಕ್ಕೆ ವರ್ಗವಣೆಗೊಂಡಿದ್ದು, ಈ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಜಿಲ್ಲಾ ವಲಯದಡಿ ಅನುದನವನ್ನು ಒದಗಿಸ ಲಾಗಿರುತ್ತದೆ.

2-

21/02/22

- ಮುಂದುವರೆದು, ಕೋವಿಡ್-19ರ ಹಿನ್ನೆಲೆಯಲ್ಲಿ ಶಾಲೆ/ಕಾಲೇಜುಗಳು ತಡವಾಗಿ ಪ್ರಾರಂಭವಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಲಯಗಳು ಹಂತ-ಹಂತವಾಗಿ ಪ್ರಾರಂಭಿಸಲ್ಪಟ್ಟಿರುವುದರಿಂದ ಹಾಗೂ ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಜಿಲ್ಲಾವಲಯದಡಿ ಒದಗಿಸಿರುವ ಅನುದಾನದಲ್ಲಿ ಭರಿಸಲಾಗುತ್ತಿರುವುದರಿಂದ, ಅನುದಾನ ಉಳಿಕೆಯಾಗಿರುತ್ತದೆ.

ಆದಕಾರಣ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರಾಜ್ಯ ವಲಯ ಯೋಜನೆ ಲೆಕ್ಕ ಶೀರ್ಷಿಕೆ 2225-03-277-2-52 ಅಬ್ಜೆಕ್ಟೀವ್ ಕೋಡ್ 117 ರಡಿ ಪುನರ್ವಿನಿಯೋಗದ ಮೂಲಕ ಮರು ಹೊಂದಾಣಿಕೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(3) ರಲ್ಲಿ ಆರ್ಥಿಕ ಇಲಾಖೆಯು 2021-22 ನೇ ಸಾಲಿಗೆ ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 2225-03-277-2-52 ಅಬ್ಜೆಕ್ಟೀವ್ ಕೋಡ್ 117 ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ ರಡಿಯಲ್ಲಿ ಒಟ್ಟು ರೂ. 2549.25 ಲಕ್ಷಗಳನ್ನು ಪುನರ್‌ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 50 ಬಿಎಂಎಸ್ 2022</u>**
**<u>ಬೆಂಗಳೂರು, ದಿನಾಂಕ: 21.02.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ:2225-03-277-2-53 ಅಬ್ಜೆಕ್ಟೀವ್ ಕೋಡ್-059 (ಇತರೆ ಖರ್ಚುಗಳು) ರಡಿ ರೂ. 466.50 ಲಕ್ಷಗಳು ಹಾಗೂ ಅದೇ ಲೆಕ್ಕಶೀರ್ಷಿಕೆಯ ಅಬ್ಜೆಕ್ಟೀವ್ ಕೋಡ್-034 (ಗುತ್ತಿಗೆ/ಹೊರಗುತ್ತಿಗೆ)ರಡಿ ರೂ.2082.75 ಲಕ್ಷಗಳು ಹೀಗೆ ಒಟ್ಟು ರೂ.2549.25 ಲಕ್ಷಗಳನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ:2225-03-277-2-52 ಅಬ್ಜೆಕ್ಟೀವ್ ಕೋಡ್-117 (ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ) ರಡಿ ಪುನರ್ವಿನಿಯೋಗ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಲೆಕ್ಕಶೀರ್ಷಿಕೆ 2225-03-277-2-52 ಅಬ್ಜೆಕ್ಟೀವ್ ಕೋಡ್-117 ರಲ್ಲಿ ಲಭ್ಯವಿರುವ ರೂ. 2549.25 ಲಕ್ಷಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

**<u>ಷರತ್ತುಗಳು:</u>**

1. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (ಎಸ್.ಎಸ್.ಪಿ) ಮೂಲಕ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಗಳಡಿ ಕೆ-2 ಮತ್ತು ಡಿಬಿಟಿ ಮಾರ್ಗಸೂಚಿಗಳ ಪ್ರಕಾರ ನಿಯಮಾನುಸಾರ ವಿದ್ಯಾರ್ಥಿಗಳ ಆಧಾರ್ ಜೋಡಣೆ ಆಗಿರುವ ಬ್ಯಾಂಕ್ ಖಾತೆಗಳಿಗೆ ವಿದ್ಯಾರ್ಥಿವೇತನ ಪಾವತಿಸುವುದು.

21/02/22

3-